ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಬಂದಿದೆ

ಆ) ಈ ಯೋಜನೆಗೆ ಸರ್ಕಾರದಿಂದ ನೇರವಾಗಿ ಹಣ ಬಿಡುಗಡೆ ಮಾಡಲಾಗುವುದಿಲ್ಲ. ಆದರೆ, ಸಾಲವನ್ನು ಪಡೆಯಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಶೆಟ್ಟಿಹಳ್ಳಿ ಮತ್ತು ಮರಳೂರು ಗ್ರಾಮಗಳಲ್ಲಿ ಗೃಹ ಮಂಡಳಿಯವರು ವಿವಿಧ ಮನೆಗಳನ್ನು ಕಟ್ಟಲು ಜಮೀನು ಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಾಲಂ 6(1)ರ ಅನ್ವಯ. ಪೋಷಣೆ ಮಾಡಿರುವುದು ಸರಿಯಷ್ಟೆ. ಇದರ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ದಾವೆ ಇದ್ದು ಇದು ಗೃಹ ಮಂಡಳಿಯ ಪರವಾಗಿ ಆದೇಶವಾಗಿರುವುದರಿಂದ ಅವಾರ್ಡ್ ನೋಟಿಸ್‌ನ ತಿಳುವಳಿ ಪತ್ರಗಳನ್ನು ಜಾರಿಗೊಳಿಸಿ ತದನಂತರ ಜಮೀನು ಖಾತೆದಾರರುಗಳಿಂದ ತೆಗೆದುಕೊಳ್ಳಲಾಗುವುದನ್ನು ಮುಂದುವರಿಸಲಾಗುತ್ತಿದೆ.

ಉ) ಪೂರ್ಣವಾಗಿ ಜಮೀನನ್ನು ವಶಕ್ಕೆ ತೆಗೆದುಕೊಂಡ ನಂತರ ಮನೆ ಕಟ್ಟುವ ಯೋಜನೆಯ ಬಗ್ಗೆ ಪರಿಶೀಲಿಸಲಾಗುವುದು.

ಆರಾಧನಾ ಸಮಿತಿಯ ಅಧಿಕಾರ ಮತ್ತು ವ್ಯಾಪ್ತಿ

1642 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಸಮಿತಿಯ ಅಧಿಕಾರ ಹಾಗೂ ವ್ಯಾಪ್ತಿ ಏನು?

ಆ) ಈ ಸಮಿತಿಯ ಶಿಫಾರಸ್ಸುಗಳನ್ನು ಜಿಲ್ಲಾಧಿಕಾರಿಗಳು ತಿರಸ್ಕರಿಸಬಹುದೆ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ವಿಧಾನ ಸಭಾ ಕ್ಷೇತ್ರವಾರು ರಚಿಸಿರುವ ಆರಾಧನಾ ಸಮಿತಿಯು ಸಂಬಂಧಿಸಿದ ವಿಧಾನ ಸಭಾ ಕ್ಷೇತ್ರದಲ್ಲಿ ಆರಾಧನಾ ಯೋಜನೆಗೆ ಒಳಪಡುವ ಧಾರ್ಮಿಕ ಸಂಸ್ಥೆಗಳಿಗೆ ದಿ:8-1-97ರ ಸರ್ಕಾರಿ ಆದೇಶ ಸಂ.ಕಂಇ104 ಮುಇವಿ95ರಲ್ಲಿ ನೀಡಿರುವ ಮಾರ್ಗ ಸೂಚಿಗಳಲ್ಲಿ ನಿಗಧಿಪಡಿಸಿರುವ ಇತಿಮಿತಿಗೆ ಒಳಪಟ್ಟು ಅನುದಾನ ಮಂಜೂರು ಮಾಡುವ ಅಧಿಕಾರ ಇರುತ್ತದೆ.

ಆ) ದಿನಾಂಕ : 8-1-97ರ ಸರ್ಕಾರದ ಆರಾಧನಾ ಯೋಜನೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಶಿಫಾರಸ್ಸುಗಳನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ.